ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಸಿ.ಜೆ.ಎಂ., ನ್ಯಾಯಾಲಯ,
ಚಿಕ್ಕಮಗಳೂರು.
ಸಿ.ಸಿ.1418/2021

| | | | |
|---|---|---|---|
| ಸಾಕ್ಷಿದಾರರ ಹೆಸರು | ಃ | ಮೇಘಾ | ಪಿ.ಡಬ್ಲ್ಯೂ.**4** |
| ಗಂಡನ ಹೆಸರು | ಃ | ಶರತ್ ರಾಜ್ | ಸಿ.ಡಬ್ಲ್ಯೂ.**6** |
| ವಯಸ್ಸು | ಃ | **30** ವರ್ಷ | |
| ವೃತ್ತಿ | ಃ | ಡಬ್ಲ್ಯೂ.ಪಿ.ಸಿ.**132**, ಅಜ್ಜಂಪುರ ಪೊಲೀಸ್ ಠಾಣೆ | |
| ವಾಸ | ಃ | ನಾಗರಹೊಳೆ, ಅಜ್ಜಂಪುರ | |

ದಿನಾಂಕಃ **04-09-2024** ರಂದು ಪ್ರಮಾಣ ವಚನ ಭೋದಿಸಲಾಯಿತು.

ಮುಖ್ಯ ವಿಚಾರಣೆಃ ಸಾಕ್ಷಿ ಸ್ವತಃ-

ನಾನು ದಿಃ**15.08.2016** ರಿಂದ ದಿಃ**29.06.2022** ರವರೆಗೆ ನಾನು ನಗರ ಪೊಲೀಸ್ ಠಾಣೆಯಲ್ಲಿ ಮಹಿಳಾ ಪೇದೆಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ ದಿಃ**02-11-2019** ರಂದು ಮಧ್ಯಾಹ್ನ **3-30** ಗಂಟೆಗೆ ಚಾಸಾ-**1** ರವರಿಗೆ ಭಾತ್ಮಿದಾರರು ಕರೆ ಮಾಡಿ ಉಪ್ಪಳ್ಳಿ ವಾಸಿ ವಸೀಂ ಎನ್ನುವವನು ಎಐಟಿ ಸರ್ಕಲ್ ನಲ್ಲಿ ಎಐಟಿ ಕಾಲೇಜು ವಿದ್ಯಾರ್ಥಿಗಳಿಗೆ ಗಾಂಜಾವನ್ನು ಎಲ್ಲಿಂದಲೋ ತೆಗೆದುಕೊಂಡು ಬಂದು ಮಾರಾಟ ಮಾಡುತ್ತಿದ್ದು ಈ ದಿನ ಸಂಜೆ **6-0** ರಿಂದ **7-00** ಗಂಟೆ ಮಧ್ಯೆ ಕೆಎ-**04**/ಎಂಎ-**9892** ಮಾರುತಿ ಕಾರಿನಲ್ಲಿ ದಂಟರಮಕ್ಕಿಯಿಂದ ಜಿಲ್ಲಾ ಶತಮಾನೋತ್ಸವ ಕ್ರೀಡಾಂಗಣದ ಮಾರ್ಗವಾಗಿ ಗಾಂಜಾವನ್ನು ತೆಗೆದುಕೊಂಡು ಹೋಗುತ್ತಿದ್ದಾನೆ ಎಂಬ ಬಗ್ಗೆ ಖಚಿತ ಮಾಹಿತಿ ತಿಳಿಸಿದರು, ಚಾಸಾ-**1** ರವರು ದಾಳಿಗೆ ಅನುಕೂಲವಾಗುವಂತೆ ಇತರ ವ್ಯವಸ್ಥೆ ಮಾಡಿಕೊಂಡು ಸದರಿ ವಿಚಾರವನ್ನ ನನಗೆ, ಹೆಚ್.ಸಿ.**324** ಶಶಿಧರ್, ಪಿಸಿ-**414** ಇಮಾನ್ ಖಾನ್, ಜೀಪ್ ಚಾಲಕ ಇಬ್ರಾಹಿಂ ಖಾನ್ ಇವರಿಗೆ

ತಿಳಿಸಿರುತ್ತಾರೆ. ಚಾಸಾ-1 ರವರು ಶೋಧನಾ ವಾರೆಂಟನ್ನ ಪಡೆದರು. ಮುಂದುವರಿದು ಚಾಸಾ-1 ರವರು ದಾಳಿ ಮಾಡುವ ಸಮಯ ಪತ್ರಾಂಕಿತ ಅಧಿಕಾರಿಗಳು ಬಂದು ಧಾಳಿಗೆ ಸಹಕರಿಸುವಂತೆ ಐಡಿಎಸ್.ಜಿ. ಪ್ರಾಂಶುಪಾಲರಿಗೆ ಪತ್ರ ವ್ಯವಹಾರ ಮಾಡಿರುತ್ತಾರೆ. ಇಬ್ಬರು ಪಂಚರನ್ನು ಕಳಿಸುವಂತೆ ತಹಸೀಲ್ದಾರರಿಗೆ ಪತ್ರ ವ್ಯವಹಾರ ಮಾಡಿರುತ್ತಾರೆ. ಸಂಜೆ 5-00 ಗಂಟೆಗೆ ಐಡಿಎಸ್.ಜಿ. ಕಾಲೇಜಿನಿಂದ ನಟರಾಜ್ ಮತ್ತು ತಾಲ್ಲೂಕು ಕಛೇರಿಯಿಂದ ಮನೋಜ್ ರವರು ಬಂದಿರುತ್ತಾರೆ.

ಇವರುಗಳಿಗೆ ಗಾಂಜಾದ ಬಗ್ಗೆ ಮಾಹಿತಿ ತಿಳಿಸಿ, ನೋಟೀಸ್ ಜಾರಿ ಮಾಡಿರುತ್ತಾರೆ. ಇವರುಗಳು ಪಂಚರಾಗಿ ಬರಲು ಒಪ್ಪಿಕೊಂಡಿರುತ್ತಾರೆ. ಠಾಣಾಧಿಕಾರಿಗಳಾದ ಚಾಸಾ4 ರಿಂದ 7 ರವರುಗಳನ್ನು ಹಾಗೂ ಪ್ರಕಾಶ್ ಎನ್ನುವವರನ್ನು ಜೊತೆ ಮಾಡಿರುತ್ತಾರೆ. ನಂತರ ಧಾಳಿಗೆ ಹೋಗುವ ಚಾಸಾ-1, ನನ್ನನ್ನು ಮತ್ತು ನಮ್ಮ ಸಿಬ್ಬಂದಿಗಳನ್ನು ಹಾಗೂ ಇಲಾಖ ವಾಹನ ಕೆಎ-18/ಜಿ-1011 ಅನ್ನು ಶೋಧಿಸಿ ಧಾಳಿ ಪೂರ್ವ ಮಹಜರ್ ಮಾಡುವಂತೆ ಚಾಸಾ2 ರವರನ್ನು ಕೋರಿರುತ್ತಾರೆ. ಇವರು ಚಾಸಾ8 ಮತ್ತು 9 ರವರ ಸಮಕ್ಷಮ ನನ್ನ, ಸಿಬ್ಬಂದಿಗಳ ಹಾಗೂ ಇಲಾಖಾ ವಾಹನವನ್ನು ಶೋಧಿಸಿ ಧಾಳಿ ಪೂರ್ವ ಮಹಜರ್ ಮಾಡಿರುತ್ತಾರೆ. ಈ ಸಮಯ ಛಾಯಾಚಿತ್ರ ತೆಗೆಯಲಾಗಿರುತ್ತದೆ. ನಂತರ ಪಂಚರು, ಸಿಬ್ಬಂದಿಗಳು, ಪತ್ರಾಂಕಿತ ಅಧಿಕಾರಿಗಳೊಂದಿಗೆ ಇಲಾಖಾ ವಾಹನದಲ್ಲಿ ಚಿಕ್ಕಮಗಳೂರು ನಗರದ ಜಿಲ್ಲಾ ಶತಮಾನೋತ್ಸವ ಕ್ರೀಡಾಂಗಣದ ಬಳಿ ತಲುಪಿರುತ್ತೇವೆ. ಕ್ರೀಡಾಂಗಣದ ಕಾಂಪೌಂಡ್ ಬಳಿ ನಿಂತು ಕಾಯುತ್ತಿರಬೇಕಾದರೆ 6-20 ಗಂಟೆಗೆ ದಂಟರಮಕ್ಕಿ ಕಡೆಯಿಂದ ಒಂದು ಆಲ್ಟೋ ಸುಜುಕಿ ಕಾರು ಸಂಖ್ಯೆಃಕೆಎ-04/ಎಂಎ-9892 ಬಂದಿದ್ದು, ಸದರಿ ಕಾರನ್ನು ಅಡ್ಡ ಹಾಕಿ ಬದಿಗೆ ನಿಲ್ಲಿಸುವಂತೆ ಸೂಚಿಸಿದ್ದು, ಚಾಲಕನು ಕಾರನ್ನು ಬದಿಗೆ ನಿಲ್ಲಿಸಿ, ಓಡಿಹೋಗಲು

ಪ್ರಯತ್ನಿಸಿದ್ದು, ಚಾಸಾ-5 ಮತ್ತು 7 ರವರು ಆತನನ್ನು ಹಿಡಿದು ನನ್ನ ಮತ್ತು ಚಾಸಾ2 ರವರ ಮುಂದೆ ಹಾಜರುಪಡಿಸಿರುತ್ತಾರೆ.

ಪತ್ರಾಂಕಿತ ಅಧಿಕಾರಿ ಹಾಗೂ ಪಂಚರ ಸಮಕ್ಷಮ ವಿಚಾರ ಮಾಡಿದಾಗ ಆತನು ತನ್ನ ಹೆಸರನ್ನು ವಸೀಂ ಯಾನೆ ಚಿಚ್ಚ ಬಿನ್ ಶಂಶುದ್ದೀನ್, ಉಪ್ಪಳ್ಳಿ ಎಂದು ತಿಳಿಸಿರುತ್ತಾನೆ. ಕಾರಿನಲ್ಲಿ ಏನಿದೆ ಎಂದು ಕೇಳಲಾಗಿ ತರಗಿನಪೇಟೆ ವಾಸಿ ಇಬ್ಬು ಅಲಿಯಾಸ್ ಗಾಂಜಾ ಇಬ್ಬು ಎನ್ನುವವನು ತನಗೆ ಪರಿಚಯವಿದ್ದು ಆತನು ತನಗೆ ಗಾಂಜಾ ಮಾಡಲು ತಂದು ಕೊಡುತ್ತಿದ್ದು, ನಾನು ಅದನ್ನು ತಲಾ 10 ಗ್ರಾಂ ನಂತೆ ಚಿಕ್ಕ ಚಿಕ್ಕ ಪ್ಯಾಕೆಟ್ ಗಳನ್ನು ಮಾಡಿ, ಎಐಟಿ ಸರ್ಕಲ್ ನಲ್ಲಿ ವಿದ್ಯಾರ್ಥಿಗಳಿಗೆ ಮಾರಾಟ ಮಾಡಿಕೊಂಡು ಬರುತ್ತಿರುತ್ತೇನೆ, ವಾರಕ್ಕೆ 2 ಬಾರಿ ಇಬ್ಬು ಹೇಳಿದಂತೆ ಮಾರಾಟ ಮಾಡುತ್ತೇನೆ ಎಂದು ತಿಳಿಸಿರುತ್ತಾನೆ. ಒಂದು ಪ್ಯಾಕೆಟ್ ನ 10 ಗ್ರಾಂ ಗಾಂಜಾವನ್ನು ರೂ.300/- ಗಳಿಗೆ ಮಾರಾಟ ಮಾಡುತ್ತಿದ್ದು, ಮಾರಾಟ ಮಾಡಿದ ಹಣಕ್ಕೆ ಶೇ.20 ಅನ್ನು ಕಮಿಷನ್ ಕೊಡುತ್ತಾನೆ ಎಂದು ತಿಳಿಸಿರುತ್ತಾನೆ. ಈ ದಿನ ಕೂಡ ಗಾಂಜಾವನ್ನು ಮಾರಾಟ ಮಾಡಲು ತನಗೆ ಕೊಟ್ಟಿದ್ದು ಅದನ್ನು ಮಾರಾಟ ಮಾಡಲು ತಾನು ಎಐಟಿ ಸರ್ಕಲ್ ಗೆ ಹೋಗುತ್ತಿದ್ದೇನೆ ಎಂದು ತಿಳಿಸಿರುತ್ತಾನೆ. ಗಾಂಜಾ ಎಲ್ಲಿದೆ ಎಂದು ಕೇಳಲಾಗಿ ಕಾರಿನ ಡ್ಯಾಷ್ ಬೋರ್ಡಿನಲ್ಲಿ ಇದೆ ಎಂದು ತಿಳಿಸಿರುತ್ತಾನೆ. ಕಾರಿನ ಬಗ್ಗೆ ಕೇಳಲಾಗಿ ಅದು ತನ್ನ ಅಕ್ಕ ಚಾಸಾ-12 ರವರಿಗೆ ಸೇರಿರುತ್ತದೆ ಎಂದು ತಿಳಿಸಿರುತ್ತಾನೆ.

ನಂತರ ಕಾರನ್ನು ಮತ್ತು ಆತನನ್ನು ಶೋಧನೆ ಮಾಡಲು ಕೇಳಲಾಗಿ ಆತನು ಪತ್ರಾಂಕಿತ ಅಧಿಕಾರಿಗಳ ಸಮಕ್ಷಮ ಶೋಧನೆ ಮಾಡಲು ಬಯಸಿರುತ್ತಾನೆ. ಈ ಬಗ್ಗೆ ಆತನಿಗೆ ನೋಟೀಸ್ ಜಾರಿ ಮಾಡಿರುತ್ತಾರೆ. ಗಾಂಜಾವನ್ನು ಮಾರಾಟ ಮಾಡಲು ಸಾಗಿಸಲು ಲೈಸೆನ್ಸ್ ಇದೆಯೇ ಎಂದು ಕೇಳಲಾಗಿ ಆತನು ಇಲ್ಲ ಎಂದು ಹೇಳಿದ ಮೇರೆಗೆ ಆತನನ್ನು ವಶಕ್ಕೆ ಪಡೆದುಕೊಂಡಿರುತ್ತಾರೆ. ನಂತರ ಚಾಸಾ-2 ರವರು ರಸ್ತೆ ಬದಿಯಲ್ಲಿ ನಿಂತಿದ್ದ ಕಾರನ್ನು ಹಾಗೂ ಆರೋಪಿಯನ್ನು ಪಂಚರ

ಸಮಕ್ಷಮ ಶೋಧನೆ ಮಾಡಲಾಗಿ, ಕಾರಿನ ಡ್ಯಾಶ್ ಬೋರ್ಡಿನಲ್ಲಿ ಒಂದು ಕಪ್ಪು ಬಣ್ಣದ ಪ್ಲಾಸ್ಟಿಕ್ ಚೀಲ ಇದ್ದು, ಅದನ್ನು ತೆಗೆದು ನೋಡಲಾಗಿ ಅದರ ಒಳಗೆ ಬೀಜ, ಕಾಂಡ, ಹೂವು ಹಣ್ಣು ಹಾಗೂ ಎಲೆಗಳಿಂದ ಕೂಡಿದ ಗಾಂಜಾ ಇರುವುದು ಕಂಡು ಬಂತು. ಠಾಣೆಯಿಂದ ತೆಗೆದುಕೊಂಡು ಹೋಗಿದ್ದ ತೂಕದ ಯಂತ್ರದಿಂದ ತೂಕ ಮಾಡಲಾಗಿ ಅದು **200** ಗ್ರಾಂ ತೂಕ ಇರುವುದು ಕಂಡು ಬಂದಿರುತ್ತದೆ. ನಂತರ ಗಾಂಜಾ ಮತ್ತು ಕಾರನ್ನು ಅಮಾನತ್ತು ಮಹಜರ್ ಮೂಲಕ ಅಮಾನತ್ತುಪಡಿಸಿಕೊಳ್ಳಲಾಗಿರುತ್ತದೆ. ನಂತರ ಗಾಂಜಾವನ್ನು ಬಿಳಿಬಟ್ಟೆಯಲ್ಲಿ ಹಾಕಿ ಸೀಲ್ ಮಾಡಿ ಅದರ ಮೇಲೆ ಪತ್ರಾಂಕಿತ ಅಧಿಕಾರಿ, ಪಂಚರು ಹಾಗೂ ನನ್ನ ಸಹಿಯುಳ್ಳ ಚೀಟಿಯನ್ನು ಅಂಟಿಸಲಾಗಿರುತ್ತದೆ. ಈ ಮಹಜರನ್ನು ಸಂಜೆ **6-20** ರಿಂದ **7-20** ರವರಿಗೆ ಠಾಣೆಯಿಂದ ತೆಗೆದುಕೊಂಡು ಹೋದ ಸರ್ಚ್ ಲೈಟ್ ಹಾಗೂ ಬೀದಿ ದೀಪಗಳ ಸಹಾಯದಿಂದ ಮಹಜರನ್ನು ಜರುಗಿಸಲಾಗಿರುತ್ತದೆ.

ನಂತರ ಸ್ಥಳದಲ್ಲಿ ಇದ್ದ ಪ್ರತ್ಯಕ್ಷ ಸಾಕ್ಷಿದಾರರಿಗೆ ನೋಟೀಸ್ ಜಾರಿ ಮಾಡಿ, ವಿಚಾರಣೆಗೆ ಠಾಣೆಗೆ ಹಾಜರಾಗುವಂತೆ ತಿಳಿಸಿರುತ್ತೇನೆ. ಅಮಾನತ್ ಮಹಜರ್ ಸಮಯ ಫೋಟೋ ತೆಗೆಸಿರುತ್ತಾರೆ. ನಂತರ ವಶಪಡಿಸಿಕೊಂಡ ಕಾರು, ವಶಕ್ಕೆ ಪಡೆದ ವಸೀಂ ಹಾಗೂ ಗಾಂಜಾದೊಂದಿಗೆ ಠಾಣೆಗೆ ಹಾಜರಾಗಿ ನಾನು ತನಿಖಾಧಿಕಾರಿ ಮುಂದೆ ಹೇಳಿಕೆ ಕೊಟ್ಟಿರುತ್ತೇನೆ. ಮಹಜರ್ ಗೆ ಸಹಿ ಮಾಡಿದ್ದು ಅದನ್ನ ನೋಡಿ ಗುರುತಿಸಿದ್ದೇನೆ. ಸಾಕ್ಷಿಗೆ ನಿಪಿ**-2** ಮತ್ತು **5** ನ್ನ ತೋರಿಸಲಾಗಿ ಅವುಗಳ ಮೇಲೆ ಇರುವ ತನ್ನ ಸಹಿಗಳನ್ನ ನೋಡಿ ಗುರುತಿಸಿದ್ದಾರೆ. ಅವುಗಳನ್ನ ನಿಪಿ**-2(**ಡಿ**)** ಮತ್ತು ನಿಪಿ**-5(**ಡಿ**)** ಎಂದು ಗುರುತಿಸಲಾಯಿತು. ಸಾಕ್ಷಿಗೆ ಫೋಟೋಗಳನ್ನ ತೋರಿಸಲಾಗಿ ಅವುಗಳಲ್ಲಿ ತಾನು, ದಸ್ತಗಿರಿಯಾದ ಆರೋಪಿ, ಇತರ ಸಿಬ್ಬಂದಿಗಳು ಮತ್ತು ಪಂಚಸಾಕ್ಷಿಗಳು ಇದ್ದಾರೆ ಎಂದು ಗುರುತಿಸಿದ್ದಾರೆ. ಸಾಕ್ಷಿಗೆ ತೋರಿಸಲಾದ ಫೋಟೋಗಳು ನಿಪಿ**-3** ಮತ್ತು ನಿಪಿ**-4,** ನಿಪಿ**-6** ರಿಂದ **11** ಎಂದು ಗುರುತಿಸಲಾಗಿದೆ. ನ್ಯಾಯಾಲಯದ ಮುಂದೆ ಇರುವ ಮುದ್ದೆ ಮಾಲನ್ನ

ನೋಡಿ ಗುರುತಿಸಿದ್ದೇನೆ. ಅದನ್ನ ಮು.ಮಾ.**1** ಎಂದು ಈಗಾಗಲೇ ಗುರುತಿಸಲಾಗಿದೆ.

ದಿಃ**07.11.2019** ರಂದು ತನಿಖಾಧಿಕಾರಿಯವರು ಈ ಪ್ರಕರಣದ ತನಿಖಾ ಕಾಲಕ್ಕೆ ತೆಗೆದ ಫೋಟೋಗಳನ್ನ ಸಿ.ಡಿ.ಗೆ ವರ್ಗಾವಣೆ ಮಾಡಿಕೊಡುವಂತೆ ನಿರ್ದೇಶಿಸಿದ ಮೇರೆಗೆ ನಮ್ಮ ಠಾಣಾ ಹ್ಯಾಂಡಿ ಕ್ಯಾಮ್ ನಲ್ಲಿ ಮಹಜರ್ ಕಾಲಕ್ಕೆ ತೆಗೆದ ಫೋಟೋಗಳನ್ನ ಠಾಣಾ ಕಂಪ್ಯೂಟರ್ ಸಹಾಯದಿಂದ ಸಿ.ಡಿ.ಗೆ ವರ್ಗಾವಣೆ ಮಾಡಿ ಫೋಟೋ ಪ್ರಿಂಟ್ ಹಾಕಿರುತ್ತೇನೆ. ಈ ಸಂಬಂಧ ದೃಢೀಕರಣ ಪತ್ರವನ್ನ ಸಿ.ಡಿ. ಮತ್ತು ಪ್ರಿಂಟ್ ಹಾಕಿದ ಫೋಟೋ ಸಹಿತ ತನಿಖಾಧಿಕಾರಿ ಮುಂದೆ ಹಾಜರು ಮಾಡಿದ್ದೇನೆ. ಸಾಕ್ಷಿಗೆ ದೃಢೀಕರಣ ಪತ್ರವನ್ನ ತೋರಿಸಲಾಗಿ ಅದರ ಮೇಲೆ ಇರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದಾರೆ. ಅದನ್ನು ನಿಪಿ-**19** ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-**19(ಎ)** ಎಂದು ಹಾಗೂ ಸಿ.ಡಿ.ಯನ್ನ ನಿಪಿ-**19(ಬಿ)** ಎಂದು ಗುರುತಿಸಲಾಯಿತು. ಫೋಟೋ ಈಗಾಗಲೇ ನಿಪಿ-**3** ಮತ್ತು ನಿಪಿ-**4,** ನಿಪಿ-**6** ರಿಂದ **11** ಎಂದು ಗುರುತಿಸಲಾಗಿದೆ. ಆರೋಪಿಯನ್ನ ನೋಡಿದರೆ ಗುರುತಿಸುತ್ತೇನೆ.

<u>ಪಾಟೀ ಸವಾಲುಃ ಆರೋಪಿಗಳ ಪರಃ ಶ್ರೀ ಎ.ಎಂ.ಕೆ. ವಕೀಲರಿಂದಃ-</u>

ಠಾಣೆಯಲ್ಲಿ ಅಂಗಶೋಧನೆ ಮಾಡಿಕೊಳ್ಳಲಾಯಿತು ಎಂದು ಹೇಳಲಾದ ಕಾಲಕ್ಕೆ ವೀಡಿಯೋ ಚಿತ್ರೀಕರಣ ಮಾಡಿಕೊಂಡಿಲ್ಲ. ಸ್ಥಳಕ್ಕೆ ಹೋದ ನಂತರ ಮತ್ತು ದಾಳಿ ಪೂರ್ವದಲ್ಲಿ ಅಂಗಶೋಧನೆ ಮಾಡಿಕೊಂಡಿಲ್ಲ. ವಾಹನ ತಪಾಸಣೆ ಮಾಡಲು ಯಾವುದೇ ಬ್ಯಾರಿಕೇಡ್ ಹಾಕಿರಲಿಲ್ಲ. ಘಟನೆ ನಡೆಯಿತು ಎನ್ನಲಾದ ರಸ್ತೆ ನೇರವಾಗಿ ಇದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ಶತಮಾನೋತ್ಸವ ಭವನದಿಂದ ನರಿಗುಡ್ಡನಹಳ್ಳಿ ಸರ್ಕಲ್ ವರೆಗೆ ರಸ್ತೆ ತಿರುವಿನಿಂದ ಕೂಡಿದೆ, ಮತ್ತೊಂದು ಕಡೆ ರಸ್ತೆ ನೇರವಾಗಿದೆ ಎನ್ನುತ್ತಾರೆ. ಆರೋಪಿಯ ವಾಹನವನ್ನ ಸುಮಾರು **10** ಮೀಟರ್ ದೂರದಿಂದ ಗಮನಿಸಿರುತ್ತೇವೆ. ನಾನು ಮತ್ತು ಚಾಸಾ-**1**

ರವರು ಸಮವಸ್ತ್ರದಲ್ಲಿ ಇದ್ದೆವು ಹಾಗೂ ಉಳಿದ ಸಿಬ್ಬಂದಿಗಳು ಬೇರೆ ಬಟ್ಟೆ ಧರಿಸಿದ್ದರು. ಆರೋಪಿ ನಮ್ಮನ್ನ ನೋಡಿ ವಾಹನವನ್ನ ವಾಪಾಸ್ ತಿರುಗಿಸಿಕೊಂಡು ಹೋಗುವ ಪ್ರಯತ್ನ ಮಾಡಿಲ್ಲ. ಸಾಕ್ಷಿ ಮುಂದುವರಿದು ಆದರೆ ಆರೋಪಿ ನಮ್ಮನ್ನ ನೋಡಿ ಇಳಿದು ಹೋಗಲು ಪ್ರಯತ್ನ ಮಾಡಿರುತ್ತಾರೆ ಎನ್ನುತ್ತಾರೆ. ಆರೋಪಿ ನಮ್ಮಿಂದ ಸುಮಾರು 5 ಅಡಿ ದೂರದಿಂದ ಓಡಲು ಪ್ರಯತ್ನ ಮಾಡಿರುತ್ತಾರೆ. ಜಿಲ್ಲಾ ಶತಮಾನೋತ್ಸವ ಭವನದ ಎದುರುಗಡೆ ವಾಸದ ಮನೆಗಳು ಇವೆ ಎಂದರೆ ಸಾಕ್ಷಿ ರತ್ನಗಿರಿ ಸ್ಪೋರ್ಟ್ಸ್ ಕ್ಲಬ್ ಮತ್ತು ಹಾಸ್ಟೇಲ್ ಇವೆ ಆದರೆ ಯಾವುದೇ ವಾಸದ ಮನೆಗಳು ಇಲ್ಲ ಎನ್ನುತ್ತಾರೆ. ಘಟನೆ ನಡೆಯಿತು ಎನ್ನಲಾದ ಸ್ಥಳದಲ್ಲಿ ಸಾರ್ವಜನಿಕರು ತಿರುಗಾಡುತ್ತಿರುತ್ತಾರೆ ಎಂದರೆ ಸಾಕ್ಷಿ ಅಷ್ಟು ಜನದಟ್ಟಣೆ ಇರಲಿಲ್ಲ ಎನ್ನುತ್ತಾರೆ. ಪತ್ರಾಂಕಿತ ಅಧಿಕಾರಿಯನ್ನ ಚಾಸಾ-1 ರವರು ಮನವಿಯನ್ನ ಕಳುಹಿಸಿ ಕರೆಸಿಕೊಂಡಿರುತ್ತಾರೆ. ಪತ್ರಾಂಕಿತ ಅಧಿಕಾರಿ ಮತ್ತು ಪಂಚಸಾಕ್ಷಿಗಳನ್ನ ವೃತ್ತ ನಿರೀಕ್ಷಕರ ಕಛೇರಿ ಬಳಿ ಕರೆಸಲಾಗಿತ್ತು. ಪಂಚಸಾಕ್ಷಿಗಳು, ಪತ್ರಾಂಕಿತ ಅಧಿಕಾರಿ ಹಾಗೂ ನಿಮ್ಮ ಸಿಬ್ಬಂದಿಗಳು ಒಂದೇ ವಾಹನದಲ್ಲಿ ಹೋದರಾ ಎಂದರೆ ಸಾಕ್ಷಿ ಜೀಪ್ ನಲ್ಲಿ ನಾನು, ಚಾಸಾ-1, ಪತ್ರಾಂಕಿತ ಅಧಿಕಾರಿ, ಪಂಚಸಾಕ್ಷಿಗಳು ಹೋದೆವು, ಇಬ್ಬರು ಸಿಬ್ಬಂದಿಗಳು ಬೈಕ್ ನಲ್ಲಿ ಬಂದರು ಎನ್ನುತ್ತಾರೆ. ಘಟನಾ ಸ್ಥಳಕ್ಕೆ ಜೀಪ್ ಚಾಲಕರನ್ನ ಸೇರಿ ಒಟ್ಟು 9 ಜನ ಹೋಗಿದ್ದೆವು. ನಾವು ಹೋಗಿದ್ದ ಜೀಪು 7+1 ಸಾಮರ್ಥ್ಯದ ಜೀಪು ಆಗಿರುತ್ತದೆ. ಆರೋಪಿ ಸುಮಾರು 30 ಮೀಟರ್ ದೂರ ಓಡಿದ್ದ. ಆರೋಪಿ ದಂಟರಮಕ್ಕಿ ಕಡೆ ಓಡಿ ಬಂದಿದ್ದ. ಆರೋಪಿಯನ್ನ ಇಮ್ರಾನ್ ಮತ್ತು ನಾನು ಮೊದಲು ಹಿಡಿದೆವು. ತೂಕದ ಯಂತ್ರವನ್ನ ಠಾಣೆಯಿಂದ ತೆಗೆದುಕೊಂಡು ಹೋಗಿದ್ದೆವು. ತೂಕದ ಯಂತ್ರ ಡಿಜಿಟಲ್ ತೂಕದ ಯಂತ್ರ ಆಗಿತ್ತು. ಸದರಿ ತೂಕದ ಯಂತ್ರ ಎಷ್ಟು ಕೆ.ಜಿ. ತೂಕ ಮಾಡುವ ಸಾಮರ್ಥ್ಯ ಹೊಂದಿತ್ತು ಎಂದರೆ  ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. 100 ಕೆ.ಜಿ.ಯಷ್ಟು ತೂಕ ಮಾಡುವ ಸಾಮರ್ಥ್ಯ ಆ ಯಂತ್ರಕ್ಕೆ ಇರಲಿಲ್ಲ. ನಾನು

**ಸ್ಥಳಕ್ಕೆ ಹೋಗಿದ್ದೆ ಎಂದು ಸುಳ್ಳು ಸಾಕ್ಷ್ಯ ನುಡಿದಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿಯನ್ನ ಮಾಲು ಸಹಿತ ಹಿಡಿಯಲಾಯಿತು ಎಂದು ಸುಳ್ಳು ಸಾಕ್ಷ್ಯ ನುಡಿದಿರುತ್ತೇನೆ ಎಂದರೆ ಸರಿಯಲ್ಲ. ಸ್ಥಳದಲ್ಲಿ ಮಹಜರ್ ಕ್ರಮ ಜರುಗಿಸಲಾಯಿತು ಎಂದು ಸುಳ್ಳು ಸಾಕ್ಷ್ಯ ನುಡಿದಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿ ಅಮಾನತ್ತುಪಡಿಸಿದ ಮಾಲನ್ನ ಸ್ವಾಧೀನ ಹೊಂದಿದ್ದ ಎಂದು ಸುಳ್ಳು ಸಾಕ್ಷ್ಯ ನುಡಿದಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿ ಸ್ವಾಧೀನದಿಂದ ಗಾಂಜಾ ಅಮಾನತ್ತುಪಡಿಸಿರುತ್ತೇವೆ ಎಂದು ಸುಳ್ಳು ಸಾಕ್ಷ್ಯ ನುಡಿದಿರುತ್ತೇನೆ ಎಂದರೆ ಸರಿಯಲ್ಲ. ಮು.ಮಾ.1 ಕ್ಕೂ ಮತ್ತು ಆರೋಪಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಮಹಜರ್ ಅನ್ನ ಠಾಣೆಯಲ್ಲಿ ಸೃಷ್ಟಿ ಮಾಡಲಾಗಿದೆ ಎಂದರೆ ಸರಿಯಲ್ಲ. ಚಾಸಾ-1 ರವರ ಮಾತು ಕೇಳಿ ನಿಪಿ-19 ನ್ನ ಈ ಕೇಸಿಗಾಗಿ ಸೃಷ್ಟಿ ಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ. ನಿಪಿ-6 ರಲ್ಲಿ ನಾನು ಇಲ್ಲ ಎಂದರೆ ಸರಿ. ಸಾಕ್ಷಿ ಮುಂದುವರಿದು ಉಳಿದ ಫೋಟೋದಲ್ಲಿ ಇದ್ದೇನೆ ಎನ್ನುತ್ತಾರೆ. ನ್ಯಾಯಾಲಯದ ಮುಂದೆ ಇರುವ ಫೋಟೋಗಳನ್ನ ಈ ಕೇಸಿಗಾಗಿ ಸೃಷ್ಟಿ ಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ.**

**ಮರು ಸವಾಲುಃ ಇಲ್ಲಾ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)**
ಓಃಹೇಃಕೇಃಸಃಇಃಎಃಒಃ

ಸಹಿ/-
**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,**
**ಮತ್ತು ಸಿ.ಜೆ.ಎಂ.,ಚಿಕ್ಕಮಗಳೂರು.**

ಎಸ್‌ಆರ್ಃ